ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1966 (2267)

ಸದಸ್ಯರ ಹೆಸರು : ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 21.03.2022

ಉತ್ತರಿಸುವವರು : ಅರಣ್ಯ ಹಾಗೂ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಅರಣ್ಯ ಇಲಾಖೆಯ ವತಿಯಿಂದ ಸಾಮಿಲ್ಲುಗಳ ಅನುಮತಿಯನ್ನು ಎಷ್ಟು ವರ್ಷಗಳಿಗೊಮ್ಮೆ ನವೀಕರಿಸಲಾಗುತ್ತದೆ; ಕಳೆದ 3 ವರ್ಷಗಳಲ್ಲಿ ಎಷ್ಟು ಸಾಮಿಲ್ಲುಗಳ ಅನುಮತಿಯನ್ನು ನವೀಕರಿಸಲಾಗಿದೆ; (ಜಿಲ್ಲಾವಾರು ವಿವರ ನೀಡುವುದು)	ಸುತ್ತೋಲೆ ಸಂಖ್ಯೆ: ಎ6/ಸಾಮಿಲ್/ಸಿಆರ್-65/2011-12, ದಿನಾಂಕ 09.06.2014ರನ್ವಯ ಅರಣ್ಯ ಇಲಾಖೆಯ ವತಿಯಿಂದ ಸಾಮಿಲ್ಲುಗಳ ಪರವಾನಗಿಯನ್ನು ಕನಿಷ್ಠ ಒಂದು ವರ್ಷ ಹಾಗೂ ಗರಿಷ್ಠ ಐದು ವರ್ಷಗಳ ಅವಧಿಗೆ ನವೀಕರಣ ಮಾಡಲಾಗುತ್ತದೆ. ಕಳೆದ 3 ವರ್ಷಗಳಲ್ಲಿ ಸಾಮಿಲ್‌ಗಳ ಪರವಾನಗಿಯನ್ನು ನವೀಕರಿಸಲಾಗಿರುವ **ವಿವರಗಳನ್ನು ಅನುಬಂಧದಲ್ಲಿ** ಒದಗಿಸಿದೆ.
ಆ)	ಸಾಮಿಲ್ಲುಗಳ ಅನುಮತಿಯನ್ನು ನವೀಕರಿಸಲು ಇರುವ ನಿಯಮಗಳು ಯಾವುವು; ಅನುಮತಿಯ ನವೀಕರಣದ ಸಮಯದಲ್ಲಿ ಸಾಮಿಲ್ಲುಗಳು ಯಾವ ಯಾವ ದಾಖಲೆಗಳನ್ನು ಸಲ್ಲಿಸಬೇಕಾಗಿದೆ ; (ವಿವರ ನೀಡುವುದು)	ಸುತ್ತೋಲೆ ಸಂಖ್ಯೆ: ಎ6/ಸಾಮಿಲ್/ ಸಿಆರ್-59/2011-12, ದಿನಾಂಕ 14.02.2013 & 22.01.2014ರಲ್ಲಿ ನಿಗಧಿಪಡಿಸಿರುವ ಷರತ್ತುಗಳನ್ವಯ ಸಾಮಿಲ್‌ಗಳ ಪರವಾನಗಿಯನ್ನು ಸಂಬಂಧಪಟ್ಟ ವಿಭಾಗಗಳ ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಪರವಾನಗಿ ಪ್ರಾಧಿಕಾರಿ ಇವರಿಂದ ನವೀಕರಿಸಲಾಗುತ್ತಿದೆ. ಸಾಮಿಲ್ ನವೀಕರಣದ ಸಮಯದಲ್ಲಿ ಸಾಮಿಲ್ ಮಾಲೀಕರು ಕರ್ನಾಟಕ ಅರಣ್ಯ ಕೈಪಿಡಿ 1976 ಪ್ಯಾರ 118ರಂತೆ ಈ ಕೆಳಗಿನ ದಾಖಲಾತಿಗಳನ್ನು ಸಲ್ಲಿಸಬೇಕಿರುತ್ತದೆ. 1. ಕರ್ನಾಟಕ ಅರಣ್ಯ ಕೈಪಿಡಿ, 1976 ನಮೂನ 30ರ ನಿಗದಿತ ನಮೂನೆಯಲ್ಲಿ ಅರ್ಜಿ 2. ಮಹಾನಗರ ಪಾಲಿಕೆಯ/ ಪುರಸಭೆ/ ಗ್ರಾಮ ಪಂಚಾಯತ್ ನಿರಾಕ್ಷೇಪಣಾ ಪತ್ರ/ ಉದ್ದಿಮೆ ಪರವಾನಗಿ 3. ವಿದ್ಯುತ್ ಸರಬರಾಜು ಕಂಪನಿಯಿಂದ ಪರವಾನಗಿ 4. ನಿರ್ದೇಶಕರು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಇವರಿಂದ ಅನುಮತಿ 5. ಜಿಎಸ್ ಟಿ ಕ್ಲಿಯರೆನ್ಸ್ 6. ಆದಾಯ ತೆರಿಗೆ ಕ್ಲಿಯರೆನ್ಸ್ 7. ಸಾಮಿಲ್ ಸ್ಥಳದ ನಕಾಶೆ

		8. ಸಾಮಿಲ್ ಪರವಾನಗಿ ನವೀಕರಿಸಲು ಶುಲ್ಕ 9. ನಮೂನೆ 43 ಮತ್ತು ನಮೂನೆ 44 ಲೆಕ್ಕಪತ್ರಗಳು 10. ಹಿಂದಿನ ಸಾಲಿಗೆ ನವೀಕರಿಸಿ ನೀಡಿದ ಪರವಾನಗಿಯ ಮೂಲ ಪ್ರತಿ.
ಇ)	ದಕ್ಷಿಣ ಕನ್ನಡ ಜಿಲ್ಲೆಯ ಆಶಾ ವುಡ್ ವರ್ಕ್ಸ್ ಸಾಮಿಲ್ಲಿನ ಅನುಮತಿಯನ್ನು ಇದುವರೆಗೆ ಎಷ್ಟು ಬಾರಿ ನವಿಕರಿಸಲಾಗಿದೆ; ಅನುಮತಿ ನವೀಕರಣದ ಸಮಯದಲ್ಲಿ ಸಾಮಿಲ್ಲಿಗೆ ತಂದ ಮರಗಳನ್ನು ರಸ್ತೆಯ ಇಕ್ಕೆಲಗಳಲ್ಲಿ ಸಂಗ್ರಹಿಸಿಡಲು ಅನುಮತಿಸಲಾಗಿದೆಯೇ; ಸಾಮಿಲ್ಲುಗಳು ಈ ಮರಗಳನ್ನು ಸಂಗ್ರಹಿಸಿಡುವ ಕುರಿತು ಇರುವ ನಿಯಮಗಳೇನು?	ದಕ್ಷಿಣ ಕನ್ನಡ ಜಿಲ್ಲೆಯ ಆಶಾ ವುಡ್ ವರ್ಕ್ಸ್ ಸಾಮಿಲ್ 1986-86ರಲ್ಲಿ ಪ್ರಾರಂಭಗೊಂಡು 2016ರವರೆಗೆ ಪ್ರತಿ ವರ್ಷ ನವೀಕರಣ ಮಾಡಲಾಗಿದೆ. 2016ರಲ್ಲಿ 2020ನೇ ಸಾಲಿನವರೆಗೆ 5 ವರ್ಷಗಳಿಗೆ ಮತ್ತು 2021ರಿಂದ 2025ನೇ ಸಾಲಿನವರೆಗೆ 5 ವರ್ಷಗಳಿಗೆ ನವೀಕರಿಸಲಾಗಿದೆ. ಸಾಮಿಲ್ಲಿಗೆ ತಂದ ಮರಗಳನ್ನು ರಸ್ತೆಯ ಇಕ್ಕೆಲಗಳಲ್ಲಿ ಸಂಗ್ರಹಿಸಲು ಅನುಮತಿ ನೀಡುವ ವಿಚಾರವು ಅರಣ್ಯ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ. ಈ ವಿಚಾರವು ಉದ್ದಿಮೆ ಪರವಾನಗಿ ನೀಡುವ ಸ್ಥಳೀಯ ಸಂಸ್ಥೆಯ ವ್ಯಾಪ್ತಿಗೆ ಬರುತ್ತದೆ. ಸಾಮಿಲ್ಲುಗಳಲ್ಲಿ ಕರ್ನಾಟಕ ಅರಣ್ಯ ನಿಯಮಗಳ ಪ್ರಕಾರ ಪರವಾನಗಿ ಪಡೆದಿರುವ ಮರಗಳನ್ನು ಸಂಗ್ರಹಿಸಲು ಅವಕಾಶ ಇರುತ್ತದೆ.

ಸಂಖ್ಯೆ: ಅಪಜೀ 19 ಎಫ್‌ಡಿಪಿ 2022

(ಉಮೇಶ್ ವಿ. ಕತ್ತಿ)
ಅರಣ್ಯ ಹಾಗೂ ಆಹಾರ, ನಾಗರೀಕ ಸರಬರಾಜು
ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು

ಅನುಬಂಧ-1 – ಎಲ್‌ಸಿಕ್ಯೂ 1966 (2267)

ಕ್ರ.ಸಂ.	ವೃತ್ತ	ವಿಭಾಗ	ನವೀಕರಸಲಾದ ಸಾಮಿಲ್‌ಗಳ ಸಂಖ್ಯೆ		
			2019-20	2020-21	2021-22
1	ಬೆಂಗಳೂರು	ಬೆಂಗಳೂರು ನಗರ	420	420	420
		ಬೆಂಗಳೂರು ಗ್ರಾಮಾಂತರ	58	58	58
		ರಾಮನಗರ	66	66	66
		ಕೋಲಾರ	54	54	54
		ಚಿಕ್ಕಬಳ್ಳಾಪುರ	23	23	23
2	ಬೆಳಗಾವಿ	ಬೆಳಗಾವಿ	111	115	108
		ಗೋಕಾಕ	142	145	139
		ಬಾಗಲಕೋಟ	109	104	74
		ವಿಜಯಪುರ	153	152	150
3	ಬಳ್ಳಾರಿ	ಬಳ್ಳಾರಿ	73	73	73
		ಕೊಪ್ಪಳ	59	59	59
		ಚಿತ್ರದುರ್ಗ	67	67	67
		ದಾವಣಗೆರೆ	74	74	74
4	ಚಾಮರಾಜನಗರ	ಬಿ.ಆರ್.ಟಿ. ಸಂರಕ್ಷಿತ ಪ್ರದೇಶ, ಚಾಮರಾಜನಗರ	12	12	12
		ಮಲೈ ಮಹದೇಶ್ವರ ವನ್ಯಜೀವಿ ವಿಭಾಗ, ಕೊಳ್ಳೇಗಾಲ	3	3	3
5	ಚಿಕ್ಕಮಗಳೂರು	ಚಿಕ್ಕಮಗಳೂರು	82	82	83
		ಕೊಪ್ಪ	5	4	5
6	ಧಾರವಾಡ	ಧಾರವಾಡ	104	103	105
		ಗದಗ	64	64	64
		ಹಾವೇರಿ	68	67	67
7	ಕಲಬುರಗಿ	ಕಲಬುರಗಿ	140	140	140
		ಬೀದರ್	122	122	122
		ರಾಯಚೂರು	51	51	51
		ಯಾದಗಿರಿ	45	45	45
8	ಹಾಸನ	ಹಾಸನ	147	147	147
		ತುಮಕೂರು	158	158	158
9	ಕೆನರಾ	ಶಿರಸಿ	13	13	13
		ಕಾರವಾರ	17	17	17
		ಹೊನ್ನಾವರ	17	17	17

ಅನುಬಂಧ–1 – ಎಲ್‌ಸಿಕ್ಯೂ 1966 (2267)

ಕ್ರ.ಸಂ.	ವೃತ್ತ	ವಿಭಾಗ	ನವೀಕರಸಲಾದ ಸಾಮಿಲ್‌ಗಳ ಸಂಖ್ಯೆ		
			2019–20	2020–21	2021–22
		ಹಳಿಯಾಳ	23	23	23
		ಯಲ್ಲಾಪುರ	8	8	8
10	ಕೊಡಗು	ಮಡಿಕೇರಿ	14	14	14
		ವಿರಾಜಪೇಟೆ	9	9	9
11	ಮೈಸೂರು	ಮೈಸೂರು	137	137	137
		ಮಂಡ್ಯ	145	145	145
		ಹುಣಸೂರು	91	91	91
12	ಮಂಗಳೂರು	ಮಂಗಳೂರು	100	100	100
		ಕುಂದಾಪುರ	89	89	89
13	ಶಿವಮೊಗ್ಗ	ಶಿವಮೊಗ್ಗ	26	26	26
		ಭದ್ರಾವತಿ	22	22	22
		ಸಾಗರ	50	50	50

ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಸಂಪನ್ಮೂಲ ನಿರ್ವಹಣೆ)